# ಆನೆ ಲದ್ದಿ



ನಾವು ಕಾಡುಗಳಲ್ಲಿ ವನ್ಯಜೀವಿಗಳನ್ನು ನೋಡಲು ಸಫಾರಿಗೆ ಹೋದಾಗ, ಒಂದೊಮ್ಮೆ ಆನೆಗಳು ಕಾಣಸಿಗದಿದ್ದರೂ ಅವುಗಳ ಲದ್ದಿ ನೋಡಲು ಸಿಗುತ್ತದೆ! ಆನೆಗಳು ದೊಡ್ಡ ಪ್ರಮಾಣದಲ್ಲಿ ಏಕೆ ಲದ್ದಿ ಹಾಕುತ್ತವೆ ಎಂದು ಕೇಳಿದಾಗ ನಮ್ಮ ಜೊತೆ ಬರುವ ಪರಿಸರವಾದಿಗಳು ಕೊಡುವ ಉತ್ತರ ಸೋಜಿಗವುಂಟುಮಾಡುತ್ತದೆ!

ಆನೆ ತಿಂದ ಆಹಾರದಲ್ಲಿ ಅರ್ಧದಷ್ಟು ಮಾತ್ರ ಅರಗಿಸಿಕೊಳ್ಳುವ ಶಕ್ತಿ ಇರುತ್ತದೆ. ಅರ್ಧದಷ್ಟು ಆಹಾರವನ್ನು ಲದ್ದಿಯಾಗಿ ವಿಸರ್ಜಿಸುತ್ತವೆ.ನಿತ್ಯ ನೂರೈವತ್ತು ಕೆ.ಜಿ.ಗಿಂತಲೂ ಹೆಚ್ಚು ಆಹಾರ ಹಾಗೂ ಅರವತ್ತು ಲೀಟರ್‌ಗಳಷ್ಟು ನೀರು ಕುಡಿಯುತ್ತವೆ. ಇವು ನಿದ್ರಿಸುವ ಅವಧಿ ಬಹಳ ಕಡಿಮೆ. ಅವುಗಳ ಲದ್ದಿಯಲ್ಲಿ ಹೆಚ್ಚು ನಾರಿನಂಶವಿರುವುದರಿಂದ ಈಗ ಇದರಿಂದ ಕಾಗದವನ್ನು ತಯಾರಿಸಲಾಗುತ್ತಿದೆ. ಅಂತೆಯೇ ಕಾಫಿ ಬೀಜಗಳು ಅರಗದೇ ಲದ್ದಿಯಲ್ಲಿ ಬರುವುದರಿಂದ ಕೆಲವು ದೇಶಗಳಲ್ಲಿ ಅವನ್ನು ಸಂಗ್ರಹಿಸಿ ಕಾಫಿ ಪುಡಿಯನ್ನು ಕೂಡ ಮಾಡುತ್ತಾರೆ.



# ಲೈಫು ಇಷ್ಟೇನೆ...!

ಬಹಳ ದಿನಗಳ ಬಳಿಕ ಕಿಟಕಿಯ ಮೇಲಿನ ಧೂಳು ಕೊಡವಲು ಪರದೆ ಸರಿಸಿದಾಗ ಕಂಡ ದೃಶ್ಯ ಇದು! ಮಳೆಗಾಲದಲ್ಲಿ ಮನೆಯ ಒಳಗೆ ಸೇರಿಕೊಳ್ಳುವ 'ಒಳಕಪ್ಪೆ' ಕಿಟಕಿಯ ಬದಿ ಕುಳಿತಲ್ಲಿಯೇ ಕೊನೆಯುಸಿರೆಳೆದಿತ್ತೋ ಏನೋ? ಚರ್ಮ, ಮಾಂಸ, ಮೇದಸ್ಸುಗಳೆಲ್ಲಾ ಕರಗಿಹೋಗಿ ಬರೀ ಅಸ್ಥಿಪಂಜರ ಮಾತ್ರ ಉಳಿದಿತ್ತು. 'ದೇಹವು ಮೂಳೆ ಮಾಂಸದ ತಡಿಕೆ, ಅದರ ಮೇಲಿದೆ ತೊಗಲಿನ ಹೊದಿಕೆ' ಎಂಬ ಭಕ್ತ ಕುಂಬಾರನ ಜೀವನ ದರ್ಶನವನ್ನು ಕಣ್ಣಾರೆ ಕಂಡಂತೆ ಅನುಭವವಾಯಿತು.

—ಡಾ. ವೇಣುಗೋಪಾಲ ಶರ್ಮಾ, ಗುರುವಾಯನಕೆರೆ

# ತೋಟದ ಕೋಲುಜೇನು

ಕೋಕೊ ತೋಟದಲ್ಲಿ ಅನಗತ್ಯ ಕೊಂಬೆಗಳನ್ನು ಸವರುತ್ತಿದ್ದಾಗ ದುತ್ತನೆ ಕೊಂಬೆಯಲ್ಲಿ ಕೋಲು ಜೇನಿನ ಗೂಡೊಂದು ಕಂಡಿತು. ಪುಟ್ಟ ಕೊಂಬೆಯಲ್ಲೇ ಅವು ವಾಸಿಸುತ್ತವೆ. ಗಡ್ಡದಂತೆ ಎರಡು ಅಡಿ ಉದ್ದದವರೆಗೂ ಒಂದೇ ಎರಿಯನ್ನು ಕಟ್ಟಿ ಜೇನು ಸಂಗ್ರಹಿಸುತ್ತವೆ.

ಜೇನುಸಾಕಣೆದಾರರು ಪೆಟ್ಟಿಗೆಯಲ್ಲಿ ಸಾಕುವ ತುಡುವೆ ಜೇನುನೊಣಗಳಿಗೆ ಹೋಲಿಸಿದರೆ ಇವುಗಳು ಗಾತ್ರದಲ್ಲಿ, ಸಂಖ್ಯೆಯಲ್ಲಿ ಕಿರಿದಾಗಿರುತ್ತವೆ. ಇವುಗಳ ಜೇನು ಸಂಗ್ರಹ ಸಾಮರ್ಥ್ಯ ತುಂಬಾ ಕಡಿಮೆ. ಅದೃಷ್ಟ ಇದ್ದರೆ ಅರ್ಧದಿಂದ ಒಂದು ಕೆ.ಜಿ. ಜೇನು ಏಪ್ರಿಲ್–ಮೇ ತಿಂಗಳ ಕೊನೆಗೆ ಸಿಗಬಹುದು.

ಇವುಗಳು ಜೇನುಸಾಕಣೆಗೆ ಒಗ್ಗುವುದಿಲ್ಲ. ಸಾಮಾನ್ಯವಾಗಿ ಸೌಮ್ಯವಾಗಿರುವ ಇವೂ ಕಚ್ಚುತ್ತವೆ. ಮನೆಯೊಳಗೂ ಗೂಡು ಕಟ್ಟುವುದು ಇದೆ. ಮಾರ್ಚ್ ವೇಳೆ ಮಳೆ ಬರಲು ಆರಂಭಿಸಿದ ಕಾರಣ ತೋಟದಲ್ಲಿದ್ದ ಜೇನು ಗೂಡನ್ನು ತೊರೆದು ಹೊರಟು ಹೋಯಿತು.

—ಅರುಣ್ ಕಿಲ್ಲೂರು

